# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಗುರುವಾರ, ೦೭, ಅಕ್ಟೋಬರ್, ೨೦೨೧ (ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021 (ASHWAYUJA , 15, SHAKAVARSHA, 1943) | ನಂ. ೮೧೯<br>No. 819 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 29 SHASANA 2021, BENGALURU, DATED:07.10.2021**

The Karnataka Municipalities and certain other Law (Second Amendment) Bill, 2021 ಇದಕ್ಕೆ 2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 30 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO. 30 OF 2021

(First published in the Karnataka Gazette Extra-ordinary on the 7th day of October, 2021)

## THE KARNATAKA MUNICIPALITIES AND CERTAIN OTHER LAW (SECOND AMENDMENT) ACT, 2021

(Received the assent of the Governor on the 5th day of October, 2021)

An Act to further amend the Karnataka Municipalities Act, 1964 and the Karnataka Municipal Corporations Act, 1976.

Whereas it is expedient further to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy second year of the Republic of India as follows:-

**1. Short title and commencement.-** (1) This Act may be called the Karnataka Municipalities and certain other Law (Second Amendment) Act, 2021.

(2) It shall come into force at once.

**2. Amendment of the Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),-

(1) in section 94, in sub section (1), in clause (b),-

(i) after the words "following taxes" the words "or fee" shall be inserted; and

(ii) in sub-clause (xiii) after the word "tax" the words "or fee" shall be inserted.

(2) in section 133, in sub-section (1) and (2) after the word "tax" the words "or fee" shall be inserted.

**3. Amendment of the Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977),-

(1) in section 103, in clause (b),-

(i) after the words "following taxes" the words "or fee" shall be inserted; and

(ii) in sub-clause (vi), after the word "tax" the words "or fee" shall be inserted.

(2) in section 134,-

(i) in the heading after the word "Tax" the word "or Fee" shall be inserted; and

(ii) in section after the word "tax" wherever it occurs, the words "or fee" shall be inserted.

(3) in section 135, in sub-section (1) and (2) after the word "tax" the words "or fee" shall be inserted; and

(4) in section 139, in the heading and in section after the word "tax" the words "or fee" shall be inserted.

By Order and in the name of
the Governor of Karnataka,

**G. SRIDHAR**
Secretary to Government
Department of Parliamentary Affairs
and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 29 ಶಾಸನ 2021, ಬೆಂಗಳೂರು, ದಿನಾಂಕ:07.10.2021**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Municipalities and certain other Law (Second Amendment) Act, 2021 (Karnataka Act 30 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 30**

(2021 ರ ಅಕ್ಟೋಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021

(2021 ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರಲ್ಲಿ, (1964ರ ಕರ್ನಾಟಕ ಅಧಿನಿಯಮ 22),-

(1) 94ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿನ (ಬಿ) ಖಂಡದಲ್ಲಿ,-

(i) "ತೆರಿಗೆಗಳನ್ನು" ಎಂಬ ಪದದ ತರುವಾಯ "ಅಥವಾ ಶುಲ್ಕವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (xiii)ನೇ ಉಪಖಂಡದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 133ನೇ ಪ್ರಕರಣದಲ್ಲಿ (1) ಮತ್ತು (2)ನೇ ಉಪಪ್ರಕರಣದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಲ್ಲಿ, (1977ರ ಕರ್ನಾಟಕ ಅಧಿನಿಯಮ 14),-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



(1) 103ನೇ ಪ್ರಕರಣದಲ್ಲಿನ (ಬಿ) ಖಂಡದಲ್ಲಿ,-

(i) "ತೆರಿಗೆಗಳನ್ನು" ಎಂಬ ಪದದ ತರುವಾಯ "ಅಥವಾ ಶುಲ್ಕವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (vi)ನೇ ಉಪಖಂಡದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 134ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) ಪ್ರಕರಣದಲ್ಲಿ "ತೆರಿಗೆ" ಎಂಬ ಪದವು ಬರುವ ಕಡೆಗಳಲ್ಲೆಲ್ಲಾ ಅದರ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) 135ನೇ ಪ್ರಕರಣದಲ್ಲಿ (1) ಮತ್ತು (2)ನೇ ಉಪಪ್ರಕರಣದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೂಕ್ತ ಪ್ರತ್ಯಯಗಳೊಂದಿಗೆ ಸೇರಿಸತಕ್ಕದ್ದು; ಮತ್ತು

(4) 139ನೇ ಪ್ರಕರಣದಲ್ಲಿ ಶೀರ್ಷಿಕೆಯಲ್ಲಿ ಮತ್ತು ಪ್ರಕರಣದಲ್ಲಿ "ತೆರಿಗೆ" ಮತ್ತು "ತೆರಿಗೆಯ" ಎಂಬ ಪದಗಳ ತರುವಾಯ "ಅಥವಾ ಶುಲ್ಕ" ಮತ್ತು "ಅಥವಾ ಶುಲ್ಕದ" ಎಂಬ ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

The above translation of the Karnataka Municipalities and certain other Law (Second Amendment) Act, 2021 (Karnataka Act 30 of 2021) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು